ಅಧ್ಯಕ್ಷರೇ, ನಾವು ಕೂಡ ಕೆಲಸ ಮಾಡುತ್ತೇವೆ. ಜೊತೆಗೆ ನಾನು ಹೇಳಿ ಬಂದಿದ್ದೇನೆ, ನಮ್ಮ ಜೊತೆ ಭಾಗವಹಿಸಿ ಎಷ್ಟು ಅರ್ಜಿಗಳು ಬಂದಿವೆ, ಯಾವ್ಯಾವ ವಿಷಯಕ್ಕೆ ಸಂಬಂಧಪಟ್ಟ ಅರ್ಜಿಗಳು, ಇವೆ ಎಂಬುದನ್ನೆಲ್ಲ ಪರಿಶೀಲಿಸಬೇಕೆಂದು ಹೇಳಿದ್ದೇನೆ. ನಾವು ಆಕ್ಟೋಬರ್, ನವಂಬರ್‌ನಲ್ಲಿ ರಾಜ್ಯದಲ್ಲಿ ಓಡಾಡುತ್ತೇವೆ. ನೀವು ಚುನಾವಣೆಗಾಗಿ ಓಡಾಡುತ್ತೀರಿ ಎಂದು ಹೇಳಬಹುದು. ಆದಕ್ಕೆ ನಾನು ಏನು ಮಾಡುವುದಕ್ಕೆ ಆಗುವುದಿಲ್ಲ. ಆದರೆ ಕೆಲವು ಕಡೆ ನಾವುಗಳು ಮಂತ್ರಿಗಳು ಕೆಲವು ಅನಿರೀಕ್ಷಿತ ಭೇಟಿಯನ್ನು ಮಾಡುತ್ತೇವೆ ಏಕೆ ಎಂದರೆ ಇವತ್ತಿನ ವ್ಯವಸ್ಥೆಯನ್ನು ಸ್ವಲ್ಪ ಮಟ್ಟಿಗೆ ಚುರುಕುಗೊಳಿಸಬೇಕಾದರೆ ನಾವು ನೀವೆಲ್ಲ ಸೇರಿ ಕೆಲಸ ಮಾಡಬೇಕಾಗುತ್ತದೆ. ಈ ಸರ್ಕಾರದ ಉದ್ದೇಶವೇ ಅದು. ಆ ರೀತಿಯಲ್ಲಿ ಕಾರ್ಯಕ್ರಮವನ್ನು ನಾವು ಹಮ್ಮಿಕೊಂಡಿದ್ದೇವೆ.

ವಿಷಯ:- ತುಂಗಾ ಮೇಲ್ದಂಡೆ ಯೋಜನೆಯ ಕಾರ್ಯಾಚರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 224 (2336)

ಶ್ರೀ ಶಿವಣ್ಣನವರ್ ಬಸವರಾಜು ನೀಲಪ್ಪ (ಹಾವೇರಿ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ತುಂಗಾ ಮೇಲ್ದಂಡೆ ಯೋಜನೆಯ ಕಾರ್ಯಾಚರಣೆ ಯಾವ ಹಂತದಲ್ಲಿದೆ. ತಾಂತ್ರಿಕ ಮಂಜೂರಿ ಕೇಂದ್ರದಿಂದ ಆಗಿದೆಯೇ?

ಆ)ಈ ಯೋಜನೆಯಿಂದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಎಷ್ಟು ಎಕರೆ ನೀರಾವರಿ ಸೌಲಭ್ಯ ಒದಗಿಸಲಾಗುವುದು?

ಇ) ಈ ಯೋಜನೆಗೆ 1995-96ನೇ ಸಾಲಿಗೆ ಅಂದಾಜು ವೆಚ್ಚದ ಪ್ರಮಾಣವೆಷ್ಟು; ಇದು ಯಾವ ಸಾಲಿಗೆ ಮುಕ್ತಾಯಗೊಳ್ಳುತ್ತದೆ.

ಈ) ಕೇಂದ್ರ ಸರ್ಕಾರದ ಮಂಜೂರು ಇಲ್ಲದೆ ರಾಜ್ಯ ಸರ್ಕಾರವು ಅದನ್ನು ಕಾರ್ಯರೂಪಕ್ಕೆ ತರಲಾಗುವುದೇ?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯ ಮಂತ್ರಿಗಳು):-

ಅ) ಕಾರ್ಯಚರಣೆ ಪ್ರಾರಂಭಿಕ ಹಂತದಲ್ಲಿದೆ. ಕೇಂದ್ರದಿಂದ ತಾಂತ್ರಿಕ ಮಂಜೂರಾತಿ ನಿರೀಕ್ಷಿಸಲಾಗಿದೆ.

ಆ) ಈ ಯೋಜನೆಯ ಅಡಿಯಲ್ಲಿ ತಾಲ್ಲೂಕುವಾರು ನೀರಾವರಿಯಾಗುವ ಪ್ರದೇಶಗಳು ಕೆಳಕಂಡಂತಿವೆ.

ತಾಲ್ಲೂಕು	ನೀರಾವರಿ ಪ್ರದೇಶ (ಹೆಕ್ಟೇರ್)
ಶಿವಮೊಗ್ಗ	2125
ಹೊನ್ನಾಳಿ	5981
ಹರಿಹರ	247
ಹಿರೇಕೆರೂರು	11052
ರಾಣೆಬೆನ್ನೂರು	43383
ಹಾವೇರಿ	30279
ಹಾನಗಲ್	1631
ಒಟ್ಟು :	94698

ಇ) ಈ ಯೋಜನೆಗೆ 1995-96ನೇ ಸಾಲಿಗೆ ಒದಗಿಸಿರುವ ಅನುದಾನ ರೂ . 750.00 ಲಕ್ಷ ಈ ಯೋಜನೆಯನ್ನು 2000ನೇ ಇಸವಿಯ ಒಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಈ) ಕೇಂದ್ರ ಸರ್ಕಾರದ ಮಂಜೂರಾತಿಯ ನಿರೀಕ್ಷೆಯಲ್ಲಿ ಈ ಯೋಜನೆಯ ಕಾರ್ಯಗಳನ್ನು ಪ್ರಾರಂಭಿಸಲಾಗಿದೆ.

ಶ್ರೀ ಸಿ.ಎಂ.ಉದಾಸಿ (ಶ್ರೀ ಶಿವಣ್ಣನವರ ಪರವಾಗಿ):- ಮಾನ್ಯ ಅಧ್ಯಕ್ಷರೇ, ಈ ಯೋಜನೆಯು 2000 ಇಸವಿಯೊಳಗಾಗಿ ಮುಗಿಸಬೇಕೆಂದು ಅವರು ಕೊಟ್ಟಿರುವ ಉತ್ತರದಲ್ಲಿ ಹೇಳಿದ್ದಾರೆ. ಆದರೆ 1995-96ನೇ ಸಾಲಿಗೆ ಕೇವಲ ಏಳೂವರೆ ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಈ ಯೋಜನೆಗೆ ಸುಮಾರು 200 ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಹಣಬೇಕಾಗಿದೆ. ಈ ಯೋಜನೆಯಿಂದ ಸುಮಾರು ಎರಡೂವರೆ ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿಯಾಗುವ ಯೋಜನೆ ಇರುವುದರಿಂದ ಸರ್ಕಾರ ಇದಕ್ಕೆ ಹೆಚ್ಚಿಗೆ ಹಣವನ್ನು ಏನಾದರೂ ಬಿಡುಗಡೆ ಮಾಡಲು ಬಯಸುತ್ತದೆಯೇ? ಈ ಯೋಜನೆಯನ್ನು 2000 ಇಸವಿಯೊಳಗೆ ಬಗೆಹರಿಸಬೇಕೆಂದರೆ ಪ್ರತಿ ವರ್ಷ ಏಳೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾ ಹೋದರೆ ಸಂಪೂರ್ಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ತಮ್ಮ ಮುಖೇನ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿವರಗಳನ್ನು ಕೇಳಬಯಸುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಸದಸ್ಯರ ಮನಸ್ಸಿನಲ್ಲಿರುವಂಥ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಈ ಯೋಜನೆಗೆ 1991ರಲ್ಲಿ 271 ಕೋಟಿ 41 ಲಕ್ಷಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿಯವರೆಗೆ ಖರ್ಚಾಗಿರುವ ಹಣ 379 ಕೋಟಿ ಆಗುತ್ತದೆ ಪುನಃ ರಿವೈಜ್ಡ್ ಎಸ್ಟಿಮೆಟ್ ಸಿಬ್ಬಂದಿ ವೆಚ್ಚಕ್ಕಾಗಿ 246 ಲಕ್ಷ ರೂಗಳು ಖರ್ಚಾಗಿದೆ. ಈ ಪೈಕಿ ಕಾಮಗಾರಿಗಳಿಗೆ ಮಾಡಿದಂಥ ವೆಚ್ಚ 335ಲಕ್ಷ ರೂ.ಗಳು ಒಟ್ಟು 587ಲಕ್ಷ ರೂ.ಗಳು. ಈ ವರ್ಷ 750 ಕೋಟಿ ರೂ.ಗಳನ್ನು ಇಟ್ಟಿದ್ದೇವೆ. 1991ರಿಂದ ಏನು ಖರ್ಚಾಗಿದೆ ಎಂದರೆ 587ಲಕ್ಷ ರೂ.ಗಳು. ಅಲ್ಲಿ ಕ್ವಾರ್ಟರ್ಸ್ ಮತ್ತೊಂದು ಕಟ್ಟುವುದಕ್ಕೆ 335ಲಕ್ಷ ರೂ.ಗಳು. ಈ ವರ್ಷ 750ಲಕ್ಷ ಇಟ್ಟಿದ್ದೇವೆ. ಇಷ್ಟು ಮಾತ್ರಕ್ಕೆ ನಮಗೆ ತೃಪ್ತಿ ಇದೆ ಎಂದು ಅರ್ಥವಲ್ಲ. ಇದಕ್ಕೆ ಅನುದಾನವನ್ನು ಹೆಚ್ಚು ಮಾಡಿಕೊಳ್ಳಬೇಕಾಗುತ್ತದೆ. ಅನುದಾನವನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಸರ್ಕಾರದ ಸಂಪನ್ಮೂಲಗಳನ್ನು ಅವಲಂಬಿಸಬೇಕಾಗುತ್ತದೆ. ಆದಕ್ಕೆ ನಾನು ರೀತಿಯ ಪ್ರಯತ್ನವನ್ನು ಮಾಡುತ್ತಿದ್ದೇವೆ. ತಾವು ಹೇಳಿದಂತಹ ವಿಷಯವನ್ನು ಗಮನದಲ್ಲಿಟ್ಟಕೊಂಡು ಸ್ವಲ್ಪ ಹಣವನ್ನು ಹೆಚ್ಚು ತೊಡಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ.ಎಂ.ಉದಾಸಿ:- 2000 ಇಸವಿಯೊಳಗೆ ಮುಗಿಸಬೇಕೆಂದು ಹೇಳುವುದಾದರೆ, ಕನಿಷ್ಟ ವರ್ಷಕ್ಕೆ 50-60 ಕೋಟಿ ರೂಪಾಯಿಗಳನ್ನು ಒದಗಿಸಬೇಕಾಗುತ್ತದೆ. ಈ ಯೋಜನೆಯು ಬಹಳ ಮಹತ್ವದ್ದಾಗಿರುವುದರಿಂದ ತೀವ್ರ ಗಮನ ಹರಿಸಿ ಈ ವರ್ಷಕ್ಕೆ 50 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡುತ್ತಾರೆ ಎಂದು ಅಂದುಕೊಂಡಿದ್ದೇನೆ.

ಶ್ರೀ ಹೆಚ್.ಡಿ.ದೇವೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಇವರು ಹೇಳಿದಂತಹ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ.

ವಿಷಯ:- ಅರ್ಕಾವತಿ ಯೋಜನೆಗಾಗಿ ಮಾಡಲಾದ ವೆಚ್ಚ